**ಸಾಕ್ಷಿಯನ್ನು ಇಂದು ದಿನಾಂಕಃ 19-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ಈ ದಾವೆಯನ್ನು ವಾದಿಯರು ನನ್ನ ವಿರುದ್ದ ಹಾಗೂ ದಾವಾ ಆಸ್ತಿಯನ್ನು ಖರೀದಿ ಹಾಕಿಕೊಟ್ಟವರ ವಿರುದ್ದ ಮಾಡಿರುತ್ತಾರೆ. ಸದರಿ ದಾವೆಯು ತಪ್ಪಾಗಿ ಖರೀದಿ ಮಾಡಿರುತ್ತೇವೆ ಎಂದು ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ. ನಾನು ದಾವಾ ಆಸ್ತಿಯ ಒಂದು ಭಾಗವನ್ನು ಕಾಳವ್ವ ಕಾಲತಿಪ್ಪಿ ಹಾಗೂ ಆಕೆಯ 7 ಜನ ಸಹೋದರರಿಂದ ಖರೀದಿ ಮಾಡಿರುತ್ತೇನೆ. ದೇವೇಂದ್ರ ಸಿದ್ದಾಪೂರ ರವರಿಗೆ ಯಾವ ರೀತಿ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದೇವೇಂದ್ರ ಮಲಕಪ್ಪ ಸಿದ್ದಾಪೂರ ರವರು ಯಾರಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಹಾಗೂ ಎಷ್ಟು ಕ್ಷೇತ್ರ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ದೇವೇಂದ್ರ ಸಿದ್ದಾಪೂರ ರವರು ಖರೀದಿ ಮಾಡಿದ ಆಸ್ತಿಯ ಕುರಿತು ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ನಾನು ಖರೀದಿ ಮಾಡಿದ ಆಸ್ತಿ CTS No. 240 ಮತ್ತು 241 ಎರಡು ಹಿಸ್ಸೆಗಳು ಇರುತ್ತವೆ. CTS No.240 ವಿಸ್ತೀರ್ಣ 9 ಅಡಿ ಅಗಲ ಮತ್ತು 49 ಅಡಿ 6 ಇಂಚು ಉದ್ದ ಇರುತ್ತದೆ. CTS No.241 ರ ವಿಸ್ತೀರ್ಣ 2 ಅಡಿ ಅಗಲ 38 ಅಡಿ ಉದ್ದ ಇರುತ್ತದೆ. CTS No.240 ಮತ್ತು 241 ರಲ್ಲಿ ನಾನು ಖರೀದಿ ಮಾಡಿದ ಒಟ್ಟು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಆಸ್ತಿ ಸಂಖ್ಯೆಃ CTS No.240 ರ ಉತಾರೆಯಲ್ಲಿ ವಾದಿಯರ ಹೆಸರು ಸಹ ಇತ್ತು ಹಾಗೂ ಪ್ರತಿವಾದಿ 2 ರಿಂದ 8 ರವರ ಹೆಸರು ಇತ್ತು. CTS No.241 ರಲ್ಲಿ ಕಡಪಟ್ಟಿ ಹಾಗೂ ಪ್ರತಿವಾದಿ ನಂ.2 ರಿಂದ 8 ರವರ ಹೆಸರು ಉತಾರೆಯಲ್ಲಿ ಇತ್ತು. ವಾದಿಯರ ಮತ್ತು ಪ್ರತಿ ವಾದಿ ನಂ.2 ರಿಂದ 8 ರವರ ಮಧ್ಯ ಯಾವುದೇ ವಿಭಾಗ ಆಗಿರಲಿಲ್ಲ. ಸಾಕ್ಷಿಯು ಮುಂದುವರೆದು ಉತಾರೆಗಳಲ್ಲಿ ಹೆಚ-1 ಹಾಗೂ ಹೆಚ್-2 ಅಂತ ಇದ್ದವು ಎಂದು ನುಡಿಯುತ್ತಾರೆ. ಅಂದರೆ 11 ಇ ನಕಾಶೆ ಆಗಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಹೆಚ್-1 ರಲ್ಲಿ ಎಷ್ಟು ಕ್ಷೇತ್ರ ಮತ್ತು ಹೆಚ್-2 ರಲ್ಲಿ ಎಷ್ಟು ಕ್ಷೇತ್ರ ಎಂಬುದನ್ನು ನಿಪಿ-1 ರಲ್ಲಿ ನಮೂದು ಆಗಿರುವುದಿಲ್ಲ. ಅದರಂತೆ ಸದರಿ ಹೆಚ್-2 ರಲ್ಲಿ ಎಷ್ಟು ಕ್ಷೇತ್ರ ಎಂಬುದನ್ನು ಕಡಪಟ್ಟಿಯವರ ಉತಾರೆಯಲ್ಲಿ ಅಂದರೆ ನಿಪಿ-3 ರಲ್ಲಿ ನಮೂದು ಆಗಿರುವುದಿಲ್ಲ. ರೂಲ್ಡ ಕಾರ್ಡನಲ್ಲಿ ಎರಡು CTS No.240 ಮತ್ತು 241 ರಲ್ಲಿ ಸದರಿ ಹೆಚ್-1 ಮತ್ತು ಹೆಚ್-2 ಕ್ಷೇತ್ರವನ್ನು ನಮೂದಿಸಿದ್ದಾರೇ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದು ಇರಬಹುದು ಎಂದು

ನುಡಿಯುತ್ತಾರೆ. ಸದರಿ ಆಸ್ತಿಗಳ ರೂಲ್ಡ ಕಾರ್ಡಿನಲ್ಲಿ ಯಾವ ಆಧಾರದ ಮೇಲೆ ಸದರಿ ಕ್ಷೇತ್ರವನ್ನು ಬರೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಸದರಿ CTS No.240 ಮತ್ತು 241 ಮೂಲತಃ ಚನ್ನಪ್ಪ ಸಿದ್ರಾಮಪ್ಪ ಪಡಸಲಗಿ ರವರಿಗೆ ಸಂಬಂಧಪಟ್ಟಂತ ಆಸ್ತಿ ಎಂದರೆ ಇರಬಹುದು . ಸದರಿ ಚನ್ನಪ್ಪ ರವರು ದಿಃ 05-05-1952 ರಲ್ಲಿ ಸದರಿ ಎರಡು ಆಸ್ತಿಗಳಾದ CTS No.240 ಮತ್ತು 241 ಗಳನ್ನು ಮಹಾಲಿಂಗಯ್ಯ ಗುರುಲಿಂಗಯ್ಯ ಜಮಖಂಡಿ , ದೇವೇಂದ್ರ ಮಲಕಪ್ಪ ಸಿದ್ದಾಪೂರ ಮತ್ತು ಮಹಾಲಿಂಗಪ್ಪ ಚಮಕೇರಿ ರವರಿಗೆ ಒಂದೇ ದಿನ ಮೂರು ಖರೀದಿಪತ್ರಗಳ ಮೂಲಕ ಖರೀದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಾಲಿಂಗಪ್ಪ ಚಮಕೇರಿ ರವರ ಖರೀದಿ ಪತ್ರದಲ್ಲಿ ಅವರು ಖರೀದಿ ಮಾಡಿದಂತಹ ಕ್ಷೇತ್ರ ಪೂರ್ವ-ಪಶ್ಚಿಮ 9.25 ಅಡಿ ಮತ್ತು ಉತ್ತರ-ದಕ್ಷಿಣ 48 ಅಡಿ ಎಂದು ಕ್ಷೇತ್ರ ನಮೂದಿಸಿಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ದೇವೇಂದ್ರ ಮಲಕಪ್ಪ ಸಿದ್ದಾಪೂರ ರವರ ಖರೀದಿ ಪತ್ರದಲ್ಲಿ ಅವರು ಖರೀದಿ ಮಾಡಿದಂತಹ ಕ್ಷೇತ್ರ ಪೂರ್ವ-ಪಶ್ಚಿಮ 9.25 ಅಡಿ ಮತ್ತು ಉತ್ತರ-ದಕ್ಷಿಣ 48 ಅಡಿ ಎಂದು ಕ್ಷೇತ್ರ ನಮೂದಿಸಿಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಯು ಮುಂದುವರೆದು ನಾನು ಖರೀದಿ ಮಾಡಿದ ಆಸ್ತಿಯ ದಾಖಲಾತಿಗಳನ್ನು ಮಾತ್ರ ನಾನು ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡುವ ಪೂರ್ವದಲ್ಲಿ ರೂಲ್ಡ ಕಾರ್ಡ ಮತ್ತು ಹಾಲಿಯ ಉತಾರೆಯನ್ನು ಉಪನೋಂದಾಣಿಧಾರಿಗೆ ತೋರಿಸಿ ಸರಿ ಇದೆ ಎಂದು ಖಾತರಿ ಪಡಿಸಿಕೊಂಡ ನಂತರ ಖರೀದಿ ಮಾಡಿರುತ್ತೇನೆ. ಮಹಾಲಿಂಗಪ್ಪ ಗುರುಲಿಂಗಪ್ಪ ಜಮಖಂಡಿ ರವರ ಖರೀದಿ ಪತ್ರದಲ್ಲಿ ಅವರು ಖರೀದಿ ಮಾಡಿದಂತಹ ಕ್ಷೇತ್ರ ಪೂರ್ವ-ಪಶ್ಚಿಮ 9.25 ಅಡಿ ಮತ್ತು ಉತ್ತರ-ದಕ್ಷಿಣ 48 ಅಡಿ ಎಂದು ಕ್ಷೇತ್ರ ನಮೂದಿಸಿಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . CTS No.240 ಮತ್ತು 241 ರಲ್ಲಿ ಸದರಿ ಮೂರು ಖರೀದಿಪತ್ರಗಳ ಪ್ರಕಾರ ಒಟ್ಟು ಕ್ಷೇತ್ರದಲ್ಲಿ ಮೂರು ಸಮಭಾಗಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದೇವೇಂದ್ರ ಸಿದ್ದಾಪೂರ ರವರು ಖರೀದಿ ಮಾಡಿದಂತಹ ಆಸ್ತಿ ಕ್ಷೇತ್ರ CTS No.240 ಮತ್ತು 241 ರಲ್ಲಿ ಎರಡು ಆಸ್ತಿಗಳಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದೆ ಹಿಸ್ಸಾದಲ್ಲಿ ಬರುತ್ತದೆ ಎಂದುನುಡಿಯುತ್ತಾರೆ. ದೇವೇಂದ್ರ ರವರು ಖರೀದಿ ಮಾಡಿದ ಆಸ್ತಿ ಒಂದೇ ಹಿಸ್ಸಾದಲ್ಲಿ ಬರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1963 ರಲ್ಲಿ ಮಹಾಲಿಂಗಪೂರದಲ್ಲಿ CTS ಕಚೇರಿ ಪ್ರಾರಂಭವಾಗಿರುತ್ತದೆ ಎಂದರೆ ಹೌದು. ಅದರಂತೆ ನಿಪಿ-3 ಮತ್ತು 4 ರಲ್ಲಿ ಮಹಾಲಿಂಗಯ್ಯ ಗುರುಲಿಂಗಪ್ಪ ಜಮಖಂಡಿ ಮತ್ತು ದೇವೇಂದ್ರ ಸಿದ್ದಾಪೂರ ಹಾಗೂ ದೇವೆಂದ್ರಪ್ಪ ಮಲಕಪ್ಪ

ಸಿದ್ದಾಪೂರ ಮತ್ತು ಗಂಗಪ್ಪ ಚಮಕೇರಿ ರವರ ಹೆಸರು ಎಂದರೆ ಇರಬಹುದು. ದಿಃ 05-05-1952 ರ ಖರೀದಿ ಪತ್ರಗಳ ಆಧಾರದ ಮೇಲೆ ನಿಪಿ-3 ಮತ್ತು 4 ರಲ್ಲಿ ದೇವೇಂದ್ರ ಸಿದ್ದಾಪೂರ ರವರ ಹೆಸರು ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ18-06-1976 ರಲ್ಲಿದೇವೇಂದ್ರ ಸಿದ್ದಾಪೂರ ರವರು ತಮ್ಮ ಮನೆತನದಲ್ಲಿ ವಾಟ್ನಿ ಮಾಡುವ ಕಾಲಕ್ಕೆ ನಜರ್ಚೌಕಿನಿಂದ ಗಂಗಂಪ್ಪ ಚಮಕೇರಿ ರವರ ಹೆಸರು ಕಡಿಮೆಮಾಡಿದ್ದರಿಂದ ನಿಪಿ-7 ಮತ್ತು 8 ರಂತೆ ಜವಾಬನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜವಾಬುಗಳ ಆಧಾರದ ಮೇಲೆ CTS NO.241 ರ ಉತಾರೆಯಲ್ಲಿ ಗಂಗಪ್ಪ ಚಮಕೇರಿ ರವರ ಹೆಸರನ್ನು ದಿಃ 21-11-1978 ರಲ್ಲಿ ನಮೂದಿಸಿರುತ್ತಾರೆ ಎಂದರೆ ಗೊತ್ತಿಲ್ಲ. CTS No.241 ರ ನಾನು ಖರೀದಿ ಹಿಡಿದ ಖರೀದಿಪತ್ರದಲ್ಲಿ ನಮೂದಿಸಿದ ಒಟ್ಟು ಕ್ಷೇತ್ರಕ್ಕೆ ದೇವೇಂದ್ರಪ್ಪ ರವರು ಮಾಲೀಕರು ಇರಲಿಲ್ಲ ಎಂದರೆ ಸಾಕ್ಷಿಯು ಉತಾರೆಯಲ್ಲಿ ಎಷ್ಟು ಕ್ಷೇತ್ರ ನಮೂದಿಸಿಲಾಗಿತ್ತು ಅಷ್ಟು ಕ್ಷೇತ್ರಕ್ಕೆ ಉಪನೋಂದಾಣಾಧಿಕಾರಿ ಕಚೇರಿಯವರು ಖರೀದಿ ಕೊಟ್ಟಿರುತ್ತಾರೆ.

3. ಖರೀದಿಪತ್ರದಲ್ಲಿ ನಮೂದಿಸಿದ 67.54 ಚದರ ಮೀಟರನ್ನು ಅಡಿಯಲ್ಲಿ ಎಷ್ಟು ಅಡಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಅದರಂತೆ ನನ್ನ ಖರೀದಿಪತ್ರದಲ್ಲಿ ನಮೂದಿಸಿಲಾದಗಿ ಪೂರ್ವ-ಪಶ್ಚಿಮ 9 ಪೂಟ್ ಮತ್ತು ಉತ್ತರ -ದಕ್ಷಿಣ 49 ಅಡಿ 6 ಇಂಚು ಎಷ್ಟು ಚದರ ಅಡಿ ಆಗುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. 67.54 ಚದರ ಮೀಟರ್ 726.99 ಚದರ ಅಡಿ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಗಂಗಪ್ಪ ಚಮಕೇರಿ ರವರು ಖರೀದಿ ಮಾಡಿದ CTS No.241 ರಲ್ಲಿ 9.25x48 ಅಡಿ ಒಟ್ಟು 444 ಚದರ ಅಡಿ ಆಗುತ್ತದೆ ಎಂದರೆ ಗೊತ್ತಿಲ್ಲ. 726.99 ಚದರ ಅಡಿಯಲ್ಲಿ ವಾದಿಯರು ಖರೀಲ ಮಾಡಿದ 444 ಚದರ ಅಡಿಯನ್ನು ತೆಗೆದರೇ ಒಟ್ಟು 282 ಚದರ ಅಡಿ ದೇವೇಂದ್ರ ಸಿದ್ದಾಪೂರರವರ CTS No.241 ರಲ್ಲಿ ಕ್ಷೇತ್ರ ಇರುತ್ತದೆ ಎಂದರೆ ಸರಿಯಲ್ಲ. 282 ಚದರ ಅಡಿಯು CTS No.241 ರಲ್ಲಿ ಬರುತ್ತಿದ್ದು ಇನ್ನುಳಿದ ದೇವೇಂದ್ರ ರವರ ಕ್ಷೇತ್ರ CTS No.240 ರಲ್ಲಿ ಬರುತ್ತಿದ್ದು ಒಟ್ಟು ದೇವೇಂದ್ರ ಸಿದ್ದಾಪೂರ ರವರ ಹೆಸರಿಗೆ 444 ಚದರ ಅಡಿ ಇರುತ್ತದೆ ಎಂದರೆ ಸರಿಯಲ್ಲ. CTS No.240 ರಲ್ಲಿ ದೇವೆಂದ್ರಪ್ಪ ರವರಿಗ ಒಟ್ಟು ಕ್ಷೇತ್ರ 2x38 ಅಡಿ ಇದ್ದು , CTS No.241 ರಲ್ಲಿ 9X49.6 ಇರುತ್ತದೆ. ಸದರಿ ಅಳತೆಯು ನಾನು ಖೊಟ್ಟಿಯಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಳತೆಯ ಮಾಲೀಕರು ದೆವೇಂದ್ರಪ್ಪ ರವರು ಇದ್ದರು ಎಂದು ತೋರಿಸಲು

ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ. ನಾನು ಖರೀದಿ ಮಾಡಿದ CTS NO.241 ರ ಕ್ಷೇತ್ರಕ್ಕೆ ದೇವೇಂದ್ರ ಸಿದ್ದಾಪೂರ ರವರು ಮಾಲೀಕರು ಇರದೇ ಇದ್ದರು ಹೆಚ್ಚುವರಿ ಅಳತೆಯನ್ನು ನಮೂದು ಮಾಡಿ ಖೊಟ್ಟಿಯಾಗಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ವಾದಿಯವರು ರವರ ತಂದೆಯವರು 1952 ರಲ್ಲಿ ಖರೀದಿ ಮಾಡಿದ ಪ್ರಕಾರ ವಾದಿಯರು 9.25x48 ಕ್ಷೇತ್ರಕ್ಕೆ ಇಂದಿಗೂ ಮಾಲೀಕರು ಹಾಗೂ ಕಬ್ಜೆ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಸದರಿ ಕ್ಷೇತ್ರಕ್ಕೆ ಕಬ್ಜೆಯಲ್ಲಿ ಇರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ನನ್ನ ಖರೀದಿಪತ್ರದ ಪ್ರಕಾರ ದಾವಾ ಆಸ್ತಿಗಳ ಒಂದು ಭಾಗದಲ್ಲಿ ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. CTS No.241 ರಲ್ಲಿ ನನ್ನ ಕಬ್ಜೆಯಲ್ಲಿ ಇರತಕ್ಕ್ಮತ ಕ್ಷೇತ್ರ 282 ಚದರ ಅಡಿ ಮಾತ್ರ ಎಂದರೆ ಸರಿಯಲ್ಲ. ವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ಖರೀದಿಕಾಗದಪತ್ರದ ಮೂಲಕ ಖೊಟ್ಟಿಯಾಗಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. CTS No.241 ಕ್ಷೇತ್ರ 9x49 ಕ್ಷೇತ್ರಕ್ಕೆ ದೇವೇಂದ್ರ ರವರು ಮಾಲೀಕರು ಎಂದು ತೋರಿಸಲು ಯಾವುದೆ ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಆಸ್ತಿಯ ಪೂರ್ವಕ್ಕೆ- ವಾದಿಯರು ಇರುತ್ತಾರೆ, ಪಶ್ಚಿಮಕ್ಕೆ- ಕಡಪಟ್ಟಿಯವರು ಇರುತ್ತಾರೆ, ದಕ್ಷಿಣಕ್ಕೆ ಹಾಗೂ ಉತ್ತರಕ್ಕೆ ರಸ್ತೆಗಳು ಇವೆ. ನಾನು ಖರೀದಿ ಹಿಡಿದ CTS No.241 ಪೂರ್ವಕ್ಕೆ -ವಾದಿಯರು , ಪಶ್ಚಿಮಕ್ಕೆ - ಸಿದ್ದಾಪೂರ ರವರು(CTS No.240) , ಉತ್ತರಕ್ಕೆ -ರಸ್ತೆ , ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಚಕ್ಕಬಂದಿಗಳು ನನ್ನ ಖರೀದಿ ಪತ್ರದಲ್ಲಿ ನಮೂದು ಇಲ್ಲವಾದುದರಿಂದ ನಾನು ಸುಳ್ಳು ಚಕ್ಕಬಂದಿಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದ ಸಂಪೂರ್ಣ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**